ಅಸಲು ದಾವೆ ನಂಃ 307/2022 ಪಿ.ಡಬ್ಲ್ಯೂಃ1–ಕಲ್ಲವ್ವ ಕೋಂ ವಿರುಪಾಕ್ಷಪ್ಪ ಯರಿಗೇರಿ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 18/08/2025 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ IMK ವಕೀಲರಿಂದಃ**

1. ದಾವಾ ಆಸ್ತಿಯ ಸರ್ವೆ ನಂಬರ 23 ಕ್ಷೇತ್ರ 6 ಎಕರೆ ಆಗಿರುತ್ತದೆ. ಸದರಿ ಸರ್ವೇ ನಂಬರ 23 ರ ಕ್ಷೇತ್ರ 8 ಎಕರೆಯಲ್ಲಿ ಎರಡು ಎಕರೆ ಆಸ್ತಿಯನ್ನು ನಿಂಗಪ್ಪ ಗೊರವರ ರವರು ಮಾರಾಟ ಮಾಡಿರುತ್ತಾರೆ. ದಾವಾ ಆಸ್ತಿಯ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ನಮ್ಮ ಊರಿನಲ್ಲಿ ನಮಗೆ ಸೇರಿದ ಮನೆ ಇರುತ್ತದೆ. ಸದರಿ ಮನೆ ನಂಬರ ಮತ್ತು ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ನಾನು ಮತ್ತು 6 ನೇ ಪ್ರತಿವಾದಿಯವರು ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ಪಾರ್ವತೆವ್ವ ಗೊರವರ ರವರು ನನ್ನ ತಾಯಿ. ನನ್ನ ಅಜ್ಜನ ಹೆಸರು ನಿಂಗಪ್ಪ. ನನ್ನ ತಂದೆಯ ಹೆಸರು ಬಸಪ್ಪ . ನಿಂಗಪ್ಪ ತಂದೆ ಬಸಪ್ಪ ನನ್ನ ಅಣ್ಣ. ಕಲ್ಲವ್ವ ತಂದೆ ಬಸಪ್ಪ ಎಂದರೆ ನಾನು, ಬಸವಣ್ಣೆವ್ವ ಕೋಂ ಈರಪ್ಪ ಹಕಾರಿ ನನ್ನ ತಂಗಿ. ನಾನು ಮತ್ತು 6 ನೇ ಪ್ರತಿವಾದಿಯವರು ಮದುವೆಯಾಗಿ ಚೆನ್ನಾಗಿ ಇರುತ್ತೇವೆಂದು ಒಪ್ಪಿದ್ದ ರಿಂದ ದಿನಾಂಕ 20/12/1989 ರಂದು ದಾವಾ ಆಸ್ತಿಯಲ್ಲಿ ನಿಂಗಪ್ಪ ಬಸಪ್ಪ ರವರ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ಅದರ ಪ್ರಕಾರವಾಗಿ ಡ ನಂಬರ 4041 ಎಂದು ದಾಖಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಯಾವುದೇ ದಾಖಲಾತಿಗೆ ಸಹಿಯನ್ನು ಮಾಡಿರುವುದಿಲ್ಲ. ಹಾಗಾಗೀ ನಮಗೆ ನನ್ನ ತಂದೆಯವರ ಆಸ್ತಿಯಲ್ಲಿ ಹಿಸ್ಸಾ ಬೇಕು ಎಂದು ಸಾಕ್ಷಿ ನುಡಿದಿರುತ್ತಾರೆ. 1989 ರಿಂದ ಇಲ್ಲಿಯವರೆಗೆ ನಾನು ದಾವಾ ಆಸ್ತಿಯಲ್ಲಿ ಹಿಸ್ಸಾವನ್ನು ನನ್ನ ಅಣ್ಣನ ಹತ್ತಿರ ಕೇಳಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ನನ್ನ ಅಣ್ಣನ ಹೆಸರಿಗೆ ಆಗಿರುವುದು ಗೊತ್ತಿರುವುದಿಲ್ಲ, ನನಗೆ ಗೊತ್ತಾಗದ ಹಾಗೇ ಅವರ ಹೆಸರಿಗೆ ಆಸ್ತಿಯನ್ನು ಮಾಡಿಕೊಂಡಿರುತ್ತಾರೆ. ಹಾಗಾಗೀ ನಾನು ಕೇಳಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ಸಂಗತಿಯು ನನ್ನ ಅಣ್ಣ ನಿಧನರಾದ ನಂತರ ನನಗೆ ತಿಳಿದಿರುತ್ತದೆ. ನನ್ನ ಅಣ್ಣ ಸುಮಾರು 3 ವರ್ಷಗಳ ಹಿಂದೆ ನಿಧನರಾಗಿರುತ್ತಾರೆ. ನಾನು ನನ್ನ ತವರು ಮನೆಗೆ ನನ್ನ ಅಣ್ಣ ಬದುಕಿರುವವರೆಗೆ ಹೋಗಿ ಬರುವುದು ಮಾಡಿರುವುದಿಲ್ಲ.

2. ನಾನು ನನ್ನ ತವರು ಮನೆಗೆ ಹೋಗಿ ನನ್ನ ಅಣ್ಣನವರಿಗೆ ನಾನು ನಿಮಗೆ ಹೊಲವನ್ನು ಬಿಟ್ಟುಕೊಟ್ಟಿರುತ್ತೇನೆ, ಹಾಗಾಗೀ ನನ್ನ ಮಗನ ಮದುವೆಗೆ ಹಣವನ್ನು ನೀಡುವಂತೆ ಕೇಳಿರುತ್ತೇನೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯು ಸಹ ನನ್ನ ಅಣ್ಣನವರಿಗೆ ಆಸ್ತಿಯನ್ನು ಬಿಟ್ಟಕೊಟ್ಟಿದ್ದಕ್ಕಾಗಿ ಹಣವನ್ನು ನೀಡುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಣ್ಣನವರು 8 ಎಕರೆ 18 ಗುಂಟೆ ಆಸ್ತಿಯಲ್ಲಿ ಎರಡು ಎಕರೆ ಆಸ್ತಿಯನ್ನು ನನಗೆ ಕೊಡುತ್ತೇನೆಂದು ಹೇಳಿರುತ್ತಾರೆಂದರೆ ಸರಿಯಲ್ಲ. ಸದರಿ ಎರಡು ಎಕರೆ ಆಸ್ತಿಯನ್ನು ಮಾರಾಟ ಮಾಡಿ ಹಣವನ್ನು ನೀಡುವಂತೆ ನನ್ನ ಅಣ್ಣನವರಿಗೆ ಪೀಡಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಅಣ್ಣನವರು ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ಇರುವ ಎರಡು ಎಕರೆ 12 ಗುಂಟೆ ಆಸ್ತಿಯನ್ನು

ರೂ.18,000/- ಗೆ ಫಕೀರವ್ವ ಕೊಳ್ಳಿ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ, ಸದರಿ ಹಣವನ್ನು ನನಗೆ ಮತ್ತು 6 ನೇ ಪ್ರತಿವಾದಿಯವರಿಗೆ ನೀಡಿರುತ್ತಾರೆಂದರೆ ಸರಿಯಲ್ಲ. ನಾನು ಮತ್ತು 6 ನೇ ಪ್ರತಿವಾದಿಯವರು ಮಾರಾಟ ಮಾಡಿದ ಆಸ್ತಿಯ ಹಣವನ್ನು ಪಡೆದುಕೊಂಡು ಬಂದಿರುತ್ತೇವೆ, ಆದರೂ ಸಹ ಹಣವನ್ನು ಪಡೆದಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಫಕೀರವ್ವ ಕೊಳ್ಳಿ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ, ಹಾಗೇನಾದರೂ ಅವರನ್ನು ಪಕ್ಷಗಾರರನ್ನಾಗಿ ಮಾಡಿದರೇ ನಿಜ ಸಂಗತಿ ತಿಳಿದು ಬರುತ್ತದೆ ಎಂದು ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಾವು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುವ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಮಾಡಿರುತ್ತೇನೆ. ದಾವಾ ಆಸ್ತಿಯನ್ನು ನನ್ನ ಅಣ್ಣ ಬದುಕಿದ್ದಾಗ ಅವರೇ ಬಿತ್ತುವುದು ಮತ್ತು ಬೆಳೆಯುವುದು ಮಾಡುತ್ತಿದ್ದರು ಎಂದರೆ ಸರಿ. ನನ್ನ ಅಣ್ಣ ನಿಧನರಾದ ನಂತರ 1 ನೇ ಪ್ರತಿವಾದಿಯವರು ದಾವಾ ಆಸ್ತಿಯಲ್ಲಿ ಬಿತ್ತು ಬಿತ್ತುವುದು ಮತ್ತು ಬೆಳೆಯುವುದು ಮಾಡುತ್ತಿದ್ದರು ಎಂದರೆ ಸರಿ. ಪ್ರಸ್ತುತ ದಾವೆಯಲ್ಲಿ ಪ್ರತ್ಯೇಕ ಸ್ವಾಧೀನವನ್ನು ಕೊಡಿಸುವಂತೆ ದಾವೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸ್ವಾಧೀನದಲ್ಲಿ 1 ನೇ ಪ್ರತಿವಾದಿಯವರು ಇರುತ್ತಾರೆ, ಹಾಗಾಗೀ ಅವರಿಂದ ಸ್ವಾಧೀನವನ್ನು ಬಿಡಿಸಿಕೊಡುವಂತೆ ದಾವೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸರಿಯಾಗಿ ನ್ಯಾಯಾಲಯದ ಶುಲ್ಕವನ್ನು ಪಾವತಿ ಮಾಡದೇ ಇರುವುದರಿಂದ ಪ್ರತ್ಯೇಕ ಸ್ವಾಧೀನತೆಯ ಪರಿಹಾರವನ್ನು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಿಂಗಪ್ಪ ಬಸಪ್ಪರವರು 1989 ರಿಂದ 2017 ರವರೆಗೆ ದಾವಾ ಆಸ್ತಿಯಲ್ಲಿ ಬಿತ್ತುವುದು ಮತ್ತು ಬೆಳೆಯುವುದು ಮಾಡುತ್ತಿದ್ದರು ಎಂದರೆ ಸರಿ. ನಿಂಗಪ್ಪರವರು 1 ನೇ ಪ್ರತಿವಾದಿಯವರ ಗಂಡನಾಗಿರುತ್ತಾರೆಂದರೆ ಸರಿ. 4 ನೇ ಪ್ರತಿವಾದಿಯವರು ತನ್ನ ತಂದೆ ತಾಯಿಯನ್ನು ನೋಡಿಕೊಳ್ಳದೇ ತನ್ನ ಹೆಂಡತಿ ಮತ್ತುಮಕ್ಕಳ ಜೊತೆಗೆ ಬೇರೆಯಾಗಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 4 ನೇ ಪ್ರತಿವಾದಿಯವರು ದುಡಿಯುವುದಕ್ಕೋಸ್ಕರ ಬೇರೆಯಾಗಿರುತ್ತಾರೆಂದು ನುಡಿದಿರುತ್ತಾರೆ. 4 ನೇ ಪ್ರತಿವಾದಿಯವರು ತನ್ನ ತಂದೆ ತಾಯಿಯ ಜೊತೆಗೆ ಕೂಡಿ ವಾಸವಾಗಿದ್ದರು, ನಂತರ ಬೇರೆಯಾಗಿರುತ್ತಾರೆ. ನಿಂಗಪ್ಪ ರವರು 1 ನೇ ಪ್ರತಿವಾದಿಯವರಿಗೆ ದಿನಾಂಕ 15/11/2017 ರಂದು ಹಕ್ಕು ಬಿಟ್ಟು ಕೊಟ್ಟ ಪತ್ರವನ್ನು ಮಾಡಿಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಹಕ್ಕು ಬಿಟ್ಟು ಕೊಟ್ಟ ಪತ್ರದ ಮೂಲಕ 1 ನೇ ಪ್ರತಿವಾದಿಯವರ ಹೆಸರು ದಾವಾ ಆಸ್ತಿಯ ದಾಖಲಾತಿಗಳಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿ. ಸದರಿ ಹಕ್ಕು ಬಿಟ್ಟು ಕೊಟ್ಟ ಪತ್ರದ ಮೂಲಕ 1 ನೇ ಪ್ರತಿವಾದಿಯವರ ಹೆಸರು ದಾಖಲಾಗಿರುವುದನ್ನು ನಾನು ಎಲ್ಲಿಯು ಪ್ರಶ್ನೆ ಮಾಡಿರುವುದಿಲ್ಲ. ನಾನು ಸದರಿ ಹಕ್ಕು ಬಿಟ್ಟು ಕೊಟ್ಟ ಪತ್ರದ ಮೂಲಕ ದಾಖಲಾಗಿರುವುದನ್ನು ನಾನು ಎಲ್ಲಿಯು ಪ್ರಶ್ನೆ ಮಾಡದೇ ಇರುವುದರಿಂದ ಪ್ರಸ್ತುತ ದಾವೆಯ ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಡ ನಂಬರ 4041 ನ್ನು ಸಹ ನಾನು ಎಲ್ಲಿಯು ಪ್ರಶ್ನೆ ಮಾಡಿರುವುದಿಲ್ಲ. ಡ ನಂಬರ 4041 ನ್ನು ಸಹ ನಾನು ಎಲ್ಲಿಯು ಪ್ರಶ್ನೆಮಾಡದೇ ಇರುವುದರಿಂದ ಸದರಿ ಡ ನಂಬರ ನನಗೆ ಬಂಧನಕಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ಡ ನಂಬರ 4041 ಮಂಜೂರು ಆಗಿ 36 ವರ್ಷವಾಗಿರುತ್ತದೆ ಎಂದರೆ ಸರಿ. ಸದರಿ ಡ ನಂಬರನ್ನು ಮೂರು ವರ್ಷದ ಒಳಗಾಗಿ ಪ್ರಶ್ನೆ

ಮಾಡಬೇಕಾಗಿತ್ತು, ಆದರೆ ನಾವು ಮೂರು ವರ್ಷದ ಒಳಗಾಗಿ ಪ್ರಶ್ನೆ ಮಾಡದೇ ಇರುವುದರಿಂದ ಪ್ರಸ್ತುತ ದಾವೆಯು ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಸ್ತುತ ದಾವೆಯಲ್ಲಿ ಹಕ್ಕು ಬಿಟ್ಟು ಕೊಟ್ಟ ಪತ್ರ ಸುಳ್ಳು ಇರುತ್ತದೆ ಎಂದು ಅದನ್ನು ರದ್ದುಪಡಿಸುವಂತೆ ಪರಿಹಾರವನ್ನು ಕೇಳಿರುವುದಿಲ್ಲ ಎಂದರೆ ಸರಿ. ಘೋಷಣಾತ್ಮಕ ದಾವೆಯನ್ನು ಮಾಡದೇ ಹೊರತು ಪ್ರಸ್ತುತ ದಾವೆಯು ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 15/11/2017 ರಂದು ಆದಂತಹ ಹಕ್ಕು ಬಿಟ್ಟು ಕೊಟ್ಟ ಪತ್ರ ನೊಂದಣಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 15/11/2017 ರಂದು ನಿಂಗಪ್ಪ ರವರು ಹಕ್ಕು ಬಿಟ್ಟು ಕೊಟ್ಟ ಪತ್ರ ವನ್ನು ಬರೆದುಕೊಟ್ಟಿದ್ದರಿಂದ 1 ನೇ ಪ್ರತಿವಾದಿಯು ದಾವಾ ಆಸ್ತಿಯ ಮಾಲೀಕರಾಗಿರುತ್ತಾರೆಂದರೆ ಸಾಕ್ಷಿಯು ಇರಬಹುದು ಆದರೆ ನನಗೆ ದಾವಾ ಆಸ್ತಿಯಲ್ಲಿ ಹಿಸ್ಸಾ ಬೇಕು ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯಲ್ಲಿ ನನಗೆ ಮತ್ತು ಇನ್ನುಳಿದ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ, 1 ನೇ ಪ್ರತಿವಾದಿಯು ದಾವಾ ಆಸ್ತಿಯ ಸಂಪೂರ್ಣ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿ ಸುಳ್ಳು ಇವೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯವರು ಪ್ರಸ್ತುತ ದಾವೆಯಲ್ಲಿ ಏನು ಬರೆದು ಹಾಕಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ಮತ್ತು 6 ನೇ ಪ್ರತಿವಾದಿಯವರು ಸೇರಿಕೊಂಡು 1 ನೇ ಪ್ರತಿವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಮಾಡಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿಯು ನನ್ನ ತಂದೆಯವರಿಗೆ ಅವರ ಸಹೋದರತ್ತೆ ಮತ್ತು ಅವರ ಗಂಡನಿಂದ ಬಂದಿರುತ್ತದೆ. ದಾವಾ ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿ ಆಗಿರುವುದಿಲ್ಲ ಎಂದರೆ ಸರಿ.ದಾವಾ ಆಸ್ತಿ ನಮ್ಮ ತಂದೆಯ ಸ್ವಂತ ಆಸ್ತಿಯಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯು ನನ್ನ ತಂದೆಯವರ ಸ್ವಂತ ಆಸ್ತಿಯಾಗಿದ್ದರಿಂದ 1989 ಇಸವಿಯಲ್ಲಿ ನಿಂಗಪ್ಪರವರ ಹೆಸರಿಗೆ ಮಾಡಿಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು ಯಾವುದೇ ದಾಖಲಾತಿಗಳಿಗೆ ಸಹಿಯನ್ನು ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಮತ್ತು 6 ನೇ ಪ್ರತಿವಾದಿಯವರು 1989 ರಲ್ಲಿ ಸಹಿಯನ್ನು ಮಾಡಿ ಬಿಟ್ಟು ಕೊಟ್ಟಿದ್ದರಿಂದ ನಿಂಗಪ್ಪ ರವರ ಹೆಸರು ದಾವಾ ಆಸ್ತಿಯ ಡ ನಂಬರ 4041 ರಂತೆ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು 6 ನೇ ಪ್ರತಿವಾದಿಯವರು ಸೇರಿಕೊಂಡು ವಾದಿಯವರಿಗೆ ತೊಂದರೆಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಶ್ರೀ RKB ವಕೀಲರಿಂದಃ**

ನನ್ನ ತಂದೆ ಬಸಪ್ಪರವರನ್ನು ನಿಂಗಪ್ಪ ಗೊರವರ ರವರು ದತ್ತಕ್ಕೆ ತೆಗೆದುಕೊಂಡಿರುತ್ತಾರೆ. ದಾವಾ ಆಸ್ತಿಯ 8 ಎಕರೆ ಆಸ್ತಿಯು ನಿಂಗಪ್ಪ ಗೊರವರ ರವರ ಆಸ್ತಿಯಾಗಿರುತ್ತದೆ ಎಂದರೆ ಸರಿ. ನನ್ನ ಅಜ್ಜ ನಿಂಗಪ್ಪ ಗೊರವರ ರವರು ನಿಧನರಾದ ನಂತರ ನನ್ನ ತಂದೆಯವರು ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ IMK ವಕೀಲರಿಂದಃ</u>**

ನನ್ನ ಮೂಲ ಅಜ್ಜನ ಹೆಸರು ನನಗೆ ನೆನಪಿಲ್ಲ. ನನ್ನ ತಂದೆಯವರು ನಿಂಗಪ್ಪ ಗೊರವರ ಇವರಿಗೆ ದತ್ತಕ್ಕೆ ಹೋಗಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರು ಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು ದತ್ತಕ್ಕೆ ಹೋಗಿರುವ ಸಂಗತಿ ನನ್ನ ತಂದೆಯವರು ನನಗೆ ಹೇಳಿದ್ದರಿಂದ ನನ್ನ ತಂದೆಯರವರು ದತ್ತಕ ಹೋಗಿರುವ ಸಂಗತಿ ನನಗೆ ತಿಳಿದಿರುತ್ತದೆ. ಹಾಗಾಗೀ ದತ್ತಕ್ಕೆ ಹೋಗಿರುತ್ತಾರೆಂದು ಹೇಳಿರುತ್ತೇನೆ. ನನ್ನ ತಂದೆಯವರು ದತ್ತಕ್ಕೆ ಹೋಗಿರುವ ಯಾವುದೇ ಕಾಗದ ಪತ್ರಗಳನ್ನು ನಾನು ನೋಡಿರುವುದಿಲ್ಲ. ನನ್ನ ತಂದೆಯವರು ಯಾವ ಇಸವಿಯೆಂದು ದತ್ತಕ್ಕೆ ಹೋಗಿರುತ್ತಾರೆಂದು ನನಗೆ ನೆನಪಿಲ್ಲ. ನಾನು ದಾವೆಯನ್ನು ದಾಖಲು ಮಾಡುವ ಪೂರ್ವದಲ್ಲಿ ದತ್ತು ಪತ್ರವನ್ನು ತೆಗೆಸಿರುತ್ತೇವೆ. ಸದರಿ ದತ್ತು ಪತ್ರವನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಾನು ಯಾವುದೇ ದತ್ತು ಪತ್ರವನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸದೇ ಇದ್ದರೂ ಸಹ ಹಾಜರುಮಾಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**6 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದರಿಂದ ಅವರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**
ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.